




# ಹೀಗೂ ಉಂಟು ಪರಿಸರ ರಕ್ಷಣೆ

ಮನುಷ್ಯ– ಮೃಗಗಳ ನಡುವಣ ಸಂಘರ್ಷ, ಕೃಷಿಕರು ಎದುರಿಸುತ್ತಿರುವ ಅತಿ ದೊಡ್ಡ ಸಮಸ್ಯೆ. ಪರಿಸರದ ಇಂತಹ ಸಮಸ್ಯೆಗಳನ್ನು ನಿರ್ವಹಿಸಲೆಂದೇ ಸರ್ಕಾರ ಪ್ರತ್ಯೇಕ ಖಾತೆಯೊಂದನ್ನು ತೆರೆಯಬೇಕು. ಆದಕ್ಕೊಬ್ಬ ಸಚಿವರನ್ನು ನೇಮಿಸಬೇಕು.

★ ಕೆ. ಟಿ. ಗಟ್ಟಿ

ನಮ್ಮ ಪರಿಸರ ಎಂದರೆ ನಮ್ಮ ವಾಸಸ್ಥಾನದ ಸುತ್ತಮುತ್ತಲಿನ ಜಾಗ ಎನ್ನುವುದು ಒಂದು ಸಾಮಾನ್ಯ ಕಲ್ಪನೆ.

ಆದರೆ ಪರಿಸರ ಎಂದರೆ ನಮ್ಮ ಸುತ್ತಮುತ್ತ ಕಣ್ಣಳತೆಗೂ ಮೀರಿದ ವಿಸ್ತಾರವಾದ ಭೂಪ್ರದೇಶ ಎಂದು ಕೂಡ ತಿಳಿಯಬೇಕಾಗುತ್ತದೆ. ಈ ಭೂಪ್ರದೇಶದಲ್ಲಿ ಕೆರೆಗಳು, ತೋಡುಗಳು, ಹಳ್ಳಕೊಳ್ಳಗಳಿವೆ. ಹೊಲ ಗದ್ದೆಗಳು ಮತ್ತಿತರ ಕೃಷಿ ಭೂಮಿಯಿದೆ. ಸುತ್ತಲೂ ದಟ್ಟವಾದ ಹಸಿರು ಕಾನನವಿದೆ. ಗುಡ್ಡ ಬೆಟ್ಟಗಳಿವೆ. ಈ ಪರಿಸರದಲ್ಲಿ ಸ್ವಲ್ಪ ನಿಂತು ವೀಕ್ಷಿಸಿದರೆ ಮೈಮನ ತಂಪಾಗುತ್ತದೆ. ನೋಡಿದಷ್ಟೂ ತೃಪ್ತಿಯಾಗುವುದಿಲ್ಲ. ಇಲ್ಲೇ ಇದ್ದುಬಿಡೋಣ ಎಂದನಿಸುತ್ತದೆ.

ಇಷ್ಟು ಸುಂದರವಾದ ಭೂಸ್ವರ್ಗವನ್ನು ಯಾವ್ಯಾವುದೋ ಕಾರಣಕ್ಕೆ ತೊರೆದು ನಗರದಲ್ಲಿ ವಾಸ ಹೂಡಿದವರಿಗೆ 'ಛೆ ನಮ್ಮ ಹಳ್ಳಿ ಬಿಟ್ಟು ಬರಬಾರದಾಗಿತ್ತು' ಎಂದನಿಸುತ್ತದೆ. ಮರಳಿ ಅಲ್ಲಿಗೆ ಹೋಗೋಣ ಎಂದನಿಸುತ್ತದೆ. ಆದರೆ ನಗರದಲ್ಲಿರುವ ಅನುಕೂಲಗಳ ಆಕರ್ಷಣೆ 'ಎಲ್ಲಿಗೂ ಹೋಗಬೇಡ ಇಲ್ಲೇ ಇರು' ಎಂದು ಹೇಳುತ್ತದೆ.

ಈ ಪರಿಸರ ಕೇವಲ ವಾಸದ ತಾಣವಲ್ಲ. ಇಲ್ಲಿ ರೈತಾಪಿ ಜನರಿದ್ದಾರೆ. ನಿರಂತರ ಕೃಷಿ ಕೆಲಸ ನಡೆಯುತ್ತಿರುತ್ತದೆ. ಶ್ರಮಜೀವನವೇ ಇಲ್ಲಿಯ ನಿವಾಸಿಗಳ ಆರೋಗ್ಯ ಮತ್ತು ಆನಂದದ ರಹಸ್ಯ.

ನಿಸರ್ಗ ಎಂಬುದು ಕೇವಲ ಮನುಷ್ಯರಿಗೆ ಸೇರಿದ್ದಲ್ಲ. ನಿಸರ್ಗ ಗಿಡಮರಗಳಿಗೆ, ವಿವಿಧ ಜೀವ ಜಂತುಗಳಿಗೆ, ಮೃಗಪಕ್ಷಿಗಳಿಗೆ ಕೂಡ ಸೇರಿದ್ದು. ಸೆಕ್ಯೂರಿಟಿ ಎಂಬವನ ರಕ್ಷಣೆಯಲ್ಲಿ ಬಹುಮಹಡಿ ಕಟ್ಟಡದಲ್ಲಿ, ಫ್ಲ್ಯಾಟ್ ಎಂಬ ಗೂಡಿನಲ್ಲಿ ವಾಸಿಸುವವನ ಹಾಗೆ ಮನುಷ್ಯ ಇಲ್ಲಿ ಜೀವಿಸಲಾರ. ಮನುಷ್ಯ ತನ್ನ ಪರಿಸರದ ನೆಲ, ಜಲ, ಶುಚಿತ್ವ ಎಲ್ಲವನ್ನೂ ಕಾಪಾಡಬೇಕಾಗುತ್ತದೆ. ಮನುಷ್ಯ ಮಾತ್ರವಲ್ಲ, ಇದು ನಮ್ಮ ಭೂಮಿಯೂ ಆಗಿದೆ ಎಂದು ಇಲ್ಲಿ ವಾಸಿಸುವ ಹುಲಿ, ಸಿಂಹ, ಕರಡಿ, ಜಿಂಕೆ ಮುಂತಾದ ಮೃಗಗಳು ಕೂಡ ಭಾವಿಸುತ್ತವೆ. ಇವುಗಳನ್ನು ಕೂಡ ಮನುಷ್ಯ ಉಳಿಸಿಕೊಳ್ಳಬೇಕಾಗುತ್ತದೆ. ಇವುಗಳಿಗೆ ತೊಂದರೆ ಕೊಡದೆ ಮನುಷ್ಯ ಬದುಕಬೇಕಾಗುತ್ತದೆ.

ಆದರೆ ಮೃಗಗಳು ಮನುಷ್ಯರಿಗೆ ಸಮಾನ ಎಂದು ಮನುಷ್ಯ ಭಾವಿಸುವಂತಿಲ್ಲ. ಅವುಗಳ ದಾಳಿಗೆ ಗುರಿಯಾಗದಂತೆ ಮನುಷ್ಯ ತನ್ನನ್ನು ರಕ್ಷಿಸಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಯಾವ ವ್ಯವಸ್ಥೆಯನ್ನೂ ಮಾಡಿಕೊಳ್ಳುವ ಸಾಮರ್ಥ್ಯ ಮನುಷ್ಯನಿಗೆ ಇಲ್ಲ. ಅದಕ್ಕಾಗಿ ಅವನು ಸರಕಾರೀ ಆಡಳಿತದ ಮೊರೆ ಹೋಗಬೇಕಾಗುತ್ತದೆ.